**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-96/2014** **DW-1**

**ದಿಃ 06.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

1. ವಾದಿಯು ಈ ದಾವೆಯನ್ನು ಯಾವೆಲ್ಲಾ ಪರಿಹಾರ ಕೋರಿ ಸಲ್ಲಿಸಿರುತ್ತಾರೆಂಬುದನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಎಷ್ಟು ಹಣ ಬರಬೇಕೆಂದು ಈ ದಾವೆಯನ್ನು ಮಾಡಿರುತ್ತಾರೆಂದರೆ ಸಾಕ್ಷಿಯು ನೆನಪಿಲ್ಲ ಎನ್ನುತ್ತಾರೆ. ನಾನು ವಾದಿಯು ಈ ದಾವೆಯಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿರುವದಿಲ್ಲ.

2. ಹುಬ್ಬಳ್ಳಿಯ ಬೈಲಪ್ಪನವರನಗರದಲ್ಲಿ ತಮಗೆ ಸೇರಿದ ಒಂದು ಮನೆ ಇರುತ್ತದೆ ಎಂದರೆ ಸರಿ. ಕಳೆದ 2-3 ವರ್ಷಗಳಿಂದ ಆನಂದ ಮತ್ತು ರಮೇಶ ನನ್ನ ಜೊತೆ ಮಾತನಾಡುತ್ತಿಲ್ಲ. ನನ್ನ ಗಂಡ ಮರಣ ಹೊಂದಿದ ಕೂಡಲೇ ಆನಂದ ಮತ್ತು ರಮೇಶ ನನ್ನಿಂದ ಬೇರೆಯಾಗಿರುತ್ತಾರೆ. ನನ್ನ ಗಂಡ ಮರಣ ಹೊಂದಿ ಸುಮಾರು 5-6 ವರ್ಷ ಆಗಿರುತ್ತದೆ. 5-6 ವರ್ಷದ ಹಿಂದೆ ಆನಂದ ಮತ್ತು ರಮೇಶ ನನ್ನ ಜೊತೆ ಚೆನ್ನಾಗಿದ್ದರು ಮತ್ತು ಒಟ್ಟಾಗಿದ್ದೆವು. ನಾನು, ಆನಂದ ಮತ್ತು ರಮೇಶ ಬೈಲಪ್ಪನವರನಗರದಲ್ಲಿರುವ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ ಅವರು ಮೇಲೆ ಬೇರೆಯಾಗಿ ವಾಸವಾಗಿರುತ್ತಾರೆ ಎನ್ನುತ್ತಾರೆ. ಈ ಮನೆಯ ಮೇಲೆ ಗೃಹ ಪೈನಾನ್ಸನವರ ಸಾಲ ಇತ್ತು ಎಂದರೆ ಸರಿ. ಇದನ್ನು ಬ್ಯಾಂಕಿನವರು ಸರ್ಪೇಶಿ ಕಾಯ್ದೆ ಅಡಿಯಲ್ಲಿ ಜಪ್ತ ಮಾಡಿದ್ದರು ಎಂದರೆ ಸರಿ. ಈ ರೀತಿ ಜಪ್ತ ಮಾಡಿದ ನಂತರ ಡಿಆರ್ ಟಿ ಯಲ್ಲಿ ಕೇಸನ್ನು ಮಾಡಿದ್ದೆವು ಎಂದರೆ ಸರಿ. ಬೆಂಗಳೂರಿನ ಸದರಿ ಡಿಆರ್ ಟಿ ಯಲ್ಲಿ ಒಮ್ಮೆ ಹಣವನ್ನು ಜಮಾ ಮಾಡುವದಾಗಿ ಹೇಳಿ ಗೃಹ ಪೈನಾನ್ಸನವರ ಜೊತೆ ರಾಜಿ ಮಾಡಿಕೊಂಡಿದ್ದೆವು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಮುಂದುವರೆದ ಎರಡು ಬಾರಿ ಹಣ ತುಂಬಿರುತ್ತೇವೆ ಎನ್ನುತ್ತಾರೆ. ಆ ಸಮಯದಲ್ಲಿ ತಮ್ಮ ಅಳಿಯ ಮತ್ತು ತಮ್ಮ ಮೊಮ್ಮಕ್ಕಳು ತಮ್ಮ ಜೊತೆ ಚೆನ್ನಾಗಿದ್ದರು ಎಂದರೆ ಸರಿ. 2006 ರ ಪೆಬ್ರುವರಿ ಮಾಹೆಯಲ್ಲಿ ನನ್ನ ಗಂಡ ಮರಣ ಹೊಂದಿರುತ್ತಾರೆ. ನನ್ನ ಗಂಡ ಬದುಕಿದ್ದಾಗಲೇ ನನ್ನ ಮಗ ರಾಜೇಶ ನಮ್ಮಿಂದ ಬೇರೆಯಾಗಿ ಹೋಗಿದ್ದ. ಈ ರೀತಿ ಬೇರೆಯಾದ ನಂತರ ತಮ್ಮ ಮತ್ತು ರಾಜೇಶನ ನಡುವೆ ಯಾವದೇ ವ್ಯವಹಾರ ಇರಲಿಲ್ಲ ಎಂದರೆ ಸರಿಯಲ್ಲ.

3. ಆನಂದ ಮತ್ತು ರಮೇಶ ಬೇರೆ ಬೇರೆ ಬ್ಯಾಂಕನಲ್ಲಿ ಸಾಲವನ್ನು ಪಡೆದು ಅದನ್ನು ಮರುಪಾವತಿಸಲಾಗದೆ ತಮ್ಮನ್ನು ದಿವಾಳಿ ಎಂದು ಘೋಷಿಸಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದರೆಂದರೆ ಗೊತ್ತಿಲ್ಲ. ನ್ಯಾಯಾಲಯವು ಇವರುಗಳು ದಿವಾಳಿದಾರರು ಎಂದು ತೀರ್ಮಾನಿಸಿ ಆದೇಶ ಮಾಡಿರುತ್ತದೆ ಎಂದರೆ ಗೊತ್ತಿಲ್ಲ. ತಮ್ಮ ಗಂಡ ಜೀವಿತಾ ಅವದಿಯಲ್ಲಿ ಸಾಕಷ್ಟು ಸಾಲವನ್ನು ಮಾಡಿದ್ದು ಅವರ ಮೇಲೂ ಸಹ ಪ್ರಕರಣಗಳು ದಾಖಲಾಗಿದ್ದವು ಎಂದರೆ ಸಾಕ್ಷಿಯು ನನ್ನ ಗಂಡ ವ್ಯವಹಾರದ ಯಾವದೇ ವಿಚಾರಗಳನ್ನು ಹಂಚಿಕೊಳ್ಳುತ್ತಿರಲಿಲ್ಲ ಎನ್ನುತ್ತಾರೆ. ಅನಂತರಾಮ ನಾಯ್ಡು ರವರು ತಮ್ಮ ಗಂಡನ ಮೇಲೆ ಕೇಸನ್ನು ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ಗಂಡ ಮರಣ ಹೊಂದಿದ ನಂತರ ತಾವುಗಳು ಅವರ ವಾರಸಾದಾರಾಗಿ ಪ್ರಕರಣವನ್ನು ಮುಂದುವರಿಸಿರುತ್ತೀರಿ ಎಂದರೆ ಗೊತ್ತಿಲ್ಲ. ಅನಂತರಾಮು ನಾಯ್ಡು ರವರು ಸದರಿ ದಾವೆಯಲ್ಲಿ ಆಸ್ತಿ ಮೇಲೇ ಬೋಜಾ ದಾಖಲಿಸಬೇಕೆಂದು ಅರ್ಜಿಯನ್ನು ಹಾಕಿದ್ದರು ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ತಾವುಗಳು ಜಪ್ತಿ ಆದೇಶವನ್ನು ಮಾಡಬಾರದು ಆಸ್ತಿ ತಮ್ಮದೆಂದು 3 ನೇ ವ್ಯಕ್ತಿ ಅರ್ಜಿಯನ್ನು ಹಾಕಿದ್ದೆವು ಎಂದರೆ ನೆನಪಿಲ್ಲ. ಆ ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಆ ಪ್ರಕರಣದಲ್ಲಿ ಮೊದಲು ಪಿ ಎಚ್ ಪವಾರ ರವರು ವಕೀಲರು ನೇಮಿಸಿದ್ದು ಅವರ ಮರಣ ನಂತರ ಯಾರು ಪ್ರತಿನಿಧಿಸುತ್ತಿದ್ದರು ಎಂಬುದು ಗೊತ್ತಿಲ್ಲ. ನಾನು ಜವಳಕರ ವಕೀಲರ ಮುಖಾಂತರ ಆಸ್ತಿ ಮೇಲೆ ಬೋಜಾ ಕೂಡ್ರಿಸಬಾರದು ಎಂದು ಅರ್ಜಿಯನ್ನು ದಾಖಲಿಸಿದ್ದೆ ಎಂದರೆ ಸರಿ. ಅನಂತರಾಮು ನಾಯ್ಡುರವರು ಹಾಕಿದ ಪ್ರಕರಣದಲ್ಲಿ ನ್ಯಾಯಾಲಯವು ತಮ್ಮ ಗಂಡ ಸಾಕಷ್ಟು ಹಣವನ್ನು ಮರುಪಾವತಿಸತಬೇಕೆಂದು ಆದೇಶವಾಗಿತ್ತು ಎಂದರೆ ಗೊತ್ತಿಲ್ಲ. 2008 ರಿಂದ ರಮೇಶ ಮತ್ತು ಆನಂದ ರವರ ಹೆಸರಿನಲ್ಲಿ ಯಾವದೇ ವ್ಯವಹಾರ ಇರುವದಿಲ್ಲ ಎಂದರೆ ನನಗೆ ಅವರೇನು ಮಾಡಿರುತ್ತಾರೆಂಬುದು ಗೊತ್ತಿಲ್ಲ ಎನ್ನುತ್ತಾರೆ.

4. ಗೃಹ ಪೈನಾನ್ಸನವರು ಜಪ್ತಿ ಮಾಡಲು ಬಂದಾಗ ತಮಗೆ ಆರ್ಥಿಕವಾಗಿ ತಮ್ಮ ಮಗಳು, ಮೊಮ್ಮಗಳು ಮತ್ತು ಅಳಿಯ ಸಹಾಯ ಮಾಡಿರುತ್ತಾರೆಂದರೆ ಸಾಕ್ಷಿಯು ನಾನೇ ಅವರಿಗೆ ಹಣವನ್ನು ವಾಪಸು ಕೊಟ್ಟಿರುತ್ತೇನೆ ಎನ್ನುತ್ತಾರೆ. ಮುಂದುವರೆದು ಅವರಿಗೆ ಮೊದಲೇ ಹಣ ಕೊಟ್ಟಿದ್ದೇನೆ ಎನ್ನುತ್ತಾರೆ. ತಾವು ನ್ಯಾಯಾಲಯಕ್ಕೆ ಆರ್ಥಿಕವಾಗಿ ಬಲಾಢ್ಯರಾಗಿದ್ದೀರಿ ಮತ್ತು ಸದೃಢರಾಗಿದ್ದೀರಿ ಎಂದು ತೋರಿಸಲು ಯಾವದಾದರೂ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಬ್ಯಾಂಕಿನ ದಾಖಲೆಯನ್ನು ನೀಡಿರುತ್ತೇನೆ ಎನ್ನುತ್ತಾರೆ. ಯಾವ ಬ್ಯಾಂಕಿನ ಯಾವ ವರ್ಷದ ಸ್ಟೇಟಮೆಂಟಗನ್ನು ಹಾಜರುಪಡಿಸಿರುತ್ತೀರಿ ಎಂದರೆ ಗೊತ್ತಿಲ್ಲ. ಅನಂತರಾಮು ರವರು ಸಲ್ಲಿಸಿದ ದಾವೆಯಲ್ಲಿ ತಾವು ಸಲ್ಲಿಸಿದ ಮಧ್ಯಂತರ ಅರ್ಜಿಯು ವಜಾ ಆದ

ನಂತರ ಆ ಆದೇಶವನ್ನು ಪ್ರಶ್ನಿಸಿ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದೀರಿ ಎಂದರೆ ಗೊತ್ತಿಲ್ಲ. ಅನಂತರಾಮು ನಾಯ್ಡು ರವರು ಹಾಕಿದ ದಾವೆಯು ಅವರಂತೆ ಆಗಿರುತ್ತದೆ ಎಂದರೆ ಗೊತ್ತಿಲ್ಲ.

5. ನನ್ನ ಲಿಖಿತ ಹೇಳಿಕೆಯಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗವು ಮನೆಕೆಲಸ ಎಂದು ನಮೂದಿಸಿರುತ್ತೇನೆಂದರೆ ಸರಿ. ತಾವು ಆರ್ಥಿಕವಾಗಿ ಸಮರ್ಥರು ಎಂದು ತೋರಿಸಲು ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

6. ನನ್ನ ಮಗಳ ಗಂಡ ಅಂದರೆ ಚಂದ್ರಕಾಂತ ರವರು ವೃತ್ತಿಯಲ್ಲಿ ಇಲೆಕ್ಟ್ರಾನಿಕ್ ಇಂಜನೀಯರ ಎಂದರೆ ಸರಿ. ಅವರು ಖಾಸಗಿ ಕಂಪನಿಯಲ್ಲಿ ಒಳ್ಳೇಯ ಹುದ್ದೆಯಲ್ಲಿದ್ದರು ಎಂದರೆ ಸಾಕ್ಷಿಯು ಕೆಲಸ ಇತ್ತು ಆದರೆ ಯಾವ ಕಂಪನಿ ಮತ್ತು ಯಾವ ಊರು ಎಂಬುದು ಗೊತ್ತಿಲ್ಲ. ಅವರ ಬಳಿ ಸಾಕಷ್ಟು ಹಣ ಇರುತ್ತದೆ ಎಂದರೆ ಎಲ್ಲರೂ ಅದೇ ರೀತಿ ಹೇಳುತ್ತಾರೆ ಎಂದು ನುಡಿಯುತ್ತಾರೆ. ಗೃಹ ಬ್ಯಾಂಕಿನಲ್ಲಿ ಸಾಲ ಮಾಡುವ ಪೂರ್ವದಲ್ಲಿ ಐ ಎನ್ ಜಿ ವೈಶ್ಯ ಬ್ಯಾಂಕಿನಲ್ಲಿ ಸಹ ಸಾಲ ಇತ್ತು ಎಂದರೆ ನನಗೆ ಬ್ಯಾಂಕಿನ ವ್ಯವಹಾರ ಗೊತ್ತಿಲ್ಲ ಎನ್ನುತ್ತಾರೆ. ಐ ಎನ್ ಜಿ ವೈಶ್ಯ ಬ್ಯಾಂಕನ ಪರವಾಗಿ ತಮಗೆ ಸಾಲವನ್ನು ಮರುಪಾವತಿಸುವಂತೆ ವಕೀಲರಾದ ಪಿ ಎಚ್ ಪವಾರ ರವರು ನೋಟೀಸನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ತಮ್ಮ ಮತ್ತು ತಮ್ಮ ಮಕ್ಕಳ ಒಟ್ಟು ಸಾಲ ರೂ.40,42,000-00 ಇತ್ತು ಎಂದರೆ ಸಾಕ್ಷಿಯು ನನ್ನ ಮಕ್ಕಳದು ಇರಬಹುದು ಅಷ್ಟು ಸಾಲ ತೆಗೆದುಕೊಂಡು ನಾನೇನು ಮಾಡಲಿ ಎನ್ನುತ್ತಾರೆ. ಐ ಎನ್ ಜಿ ವೈಶ್ಯ ಬ್ಯಾಂಕನಲ್ಲಿ ಮಾಡಿದ್ದ ಸಾಲವನ್ನು ತೀರಿಸಲು ಮನೆಯನ್ನು ಗೃಹ ಫೈನಾನ್ಸನಲ್ಲಿ ಅಡಮಾನ ಇಟ್ಟಿರುತ್ತೀರಿ ಎಂದರೆ ಬ್ಯಾಂಕಿನ ವ್ಯವಹಾರ ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ಗೃಹ ಫೈನಾನ್ಸನಲ್ಲಿ ಸಾಲವನ್ನು ಕೇವಲ ಐ ಎನ್ ಜಿ ವೈಶ್ಯ ಬ್ಯಾಂಕಿನ ಸಾಲವನ್ನು ಮರುಪಾವತಿಸಲು ಮಾತ್ರ ಮಾಡಿರುತ್ತೇವೆಂದರೆ ಸಾಕ್ಷಿಯು ನನಗೆ ಬ್ಯಾಂಕಿನ ವ್ಯವಹಾರ ಯಾವದು ಗೊತ್ತಿಲ್ಲ ಎನ್ನುತ್ತಾರೆ. ತಮ್ಮ ಹೆಸರಿನಲ್ಲಿ ಎಷ್ಟು ಬ್ಯಾಂಕಗಳಲ್ಲಿ ಖಾತೆ ಇರುತ್ತದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ವಿಜಯಾ ಮತ್ತು ಕೆನರಾ ಬ್ಯಾಂಕನಲ್ಲಿ ಇರುತ್ತದೆ ಎನ್ನುತ್ತಾರೆ. ನಾನು ಮತ್ತು ನನ್ನ ಮಗಳು ಈ ಬ್ಯಾಂಕಗಳಲ್ಲಿ ಖಾತೆಯನ್ನು ತೆರೆದಿರುತ್ತೇವೆ. ಈ ಬ್ಯಾಂಕುಗಳಲ್ಲಿ ನಾನು ವ್ಯವಹಾರವನ್ನು ಮಾಡಿರುತ್ತೇನೆ. ಡಿ ಆರ್ ಟಿ ಯಲ್ಲಿ ಪ್ರಕರಣ ದಾಖಲಿಸಿದ ನಂತರ ತಾವು ಚಂದ್ರಕಾಂತ ಮತ್ತು ವಾದಿಯನ್ನು ಬೆಂಗಳೂರಿನಲ್ಲಿ ಬೇಟಿಯಾಗಿರುತ್ತೀರಿ ಎಂದರೆ ಸಾಕ್ಷಿಯು ಅವರ ಮನೆಯಲ್ಲಿ ಇದ್ದೆವು ಎನ್ನುತ್ತಾರೆ. ಸದರಿ ಪ್ರಕರಣದಲ್ಲಿ ಆರ್ಥಿಕ ಸಹಾಯ ಮಾಡಲು ಚಂದ್ರಕಾಂತ ರವರು ಮುಂದೆ ಬಂದಿರುತ್ತಾರೆಂದರೆ ಸಾಕ್ಷಿಯು ಗಂಟು ತೆಗೆದುಕೊಂಡು ಹಣ ಕೊಟ್ಟಿರುತ್ತಾರೆಂದು

ನುಡಿಯುತ್ತಾರೆ. ತಮ್ಮ ಅಳಿಯನವರು ಅವರ, ಅವರ ಮಗಳ ಮತುತ ಮೊಮ್ಮಗಳ ಖಾತೆಯಿಜದ ಸ್ವಲ್ಪ ಹಣವನ್ನು ಡ್ರಾ ಮಾಡಿಕೊಂಡು ಡಿ ಆರ್ ಟಿ ಪ್ರಕರಣದಲ್ಲಿದ್ದ ಸಾಲದ ಹಣವನ್ನು ಮರುಪಾವತಿಸಿರುತ್ತಾರೆಂದರೇ ಸಾಕಿಯುು ನಾನೇ ಹಣವನ್ನು ಅವರಿಗೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ಯಾರಿಗೆ ಹಣವನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನನ್ನ ಅಳಿಯನಿಗೆ ಮತ್ತು ನನ್ನ ಮಗಳಿಗೆ ನನ್ನ ಅಳಿಯನ ಮನೆಯಲ್ಲಿ ಹಣ ಕೊಟ್ಟಿರುತ್ತೇನೆ ಎನ್ನುತಾರೆ. ಯಾವ ತಾರೀಖನಿಂದ ಈ ರೀತಿ ಹಣ ಪಾವತಿಸಿರುತ್ತೇನೆ ಎಂಬುದು ನೆನಪಿಲ್ಲ. ಎಷ್ಟು ಹಣ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನೆನಪಿಲ್ಲ ಎನ್ನುತ್ತಾರೆ. ಈ ರೀತಿ ಹಣ ನೀಡಲಾಗಿದೆ ಎನ್ನುವ ಸಮಯದಲ್ಲಿ ತಮಗೆ ಆರ್ಥಿಕ ಸಾಮರ್ಥ್ಯ ಇತ್ತು ಎಂದು ತೋರಿಸಲು ಆ ವರ್ಷದ ಆದಾಯ ತೆರಿಗೆ ರಿಟರ್ನ್ಸನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ನಾಲ್ಕು ಮಂದಿ ಕೊಟ್ಟಿರುವದನ್ನು ಅವರಿಗೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ಯಾರ ಬಳಿ ಹಣವನ್ನು ಪಡೆದಿದ್ದೀರಿ ಎಂದರೆ ಸಾಕ್ಷಿ ಅವರ ಹೆಸರು ಹೇಳಲು ಬರುವದಿಲ್ಲ ಎನ್ನುತ್ತಾರೆ. ಈ ಬಗೆಗ ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತೀರಿ ಎಂದರೆ ಸಾಕ್ಷಿಯು ಇಲಲ ಎಂದು ಹಾಗೂ ನೆನಪಿಲ್ಲ ಎಂದು ನುಡಿಯುತ್ತಾರೆ.

7. ತಮಗೆ ಎಷ್ಟು ವಯಸ್ಸು ಎಂದರೆ ಸಾಕ್ಷಿಯು ಈ ಶ್ರಾವಣಕ್ಕೆ 77 ತುಂಬುತ್ತದೆ ಎನ್ನುತ್ತಾರೆ. 2012 ರಲ್ಲಿ ನಾನು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢಚಿವಾಗಿದ್ದೆ. ಈಗಲೂ ಸಹ ನಾನು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿರುತ್ತೇನೆ. ಆಗಾಗ ವಯೋಸಹಜ ರೋಗಗಳು ಬರುತ್ತಿವೆ ಎಂದು ನುಡಿಯುತ್ತಾರೆ. ತಮ್ಮ ಮಗಳು ಮತುತ ಅಳಿಯನಿಂದ ಹಣವನ್ನು ಪಡೆದ ಬಗ್ಗೆ ಅವರಿಗೆ ತಾವು ಪ್ರಾಮಿಸರಿ ನೋಟನ್ನು ಬರೆದುಕೊಟ್ಟಿರುತ್ತೇನೆಂದರೆ ಸಾಕ್ಷಿಯು ಯಾವದೇ ದಾಖಲೆ ಬರೆದುಕೊಟ್ಟಿಲ್ಲ ಎನ್ನುತ್ತಾರೆ. ನನಗೆ ಯಾವದೇ ಸಹಿಗಳು ಗುರುತಿಸಲು ಆಗುವದಿಲ್ಲ ಮತ್ತು ತಿಳಿಯುವದಿಲ್ಲ. ನನ್ನ ಸಹಿಯನ್ನು ಗುರುತಿಸುತ್ತೇನೆ ಆದರೆ ಈಗೀಗ ಯಾರೋ ನನ್ನ ಸಹಿಯನ್ನು ಮತ್ತು ನನ್ನ ಮಕ್ಕಳು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ 2 ರಲ್ಲಿರುವ ಸಹಿಯನ್ನು ತೋರಿಸಿ ಕೇಳಲಾಗಿ ಆ ಸಹಿ ತನ್ನದಲ್ಲ ಎನ್ನುತ್ತಾರೆ. ವಾದಿಯು ಈ ದಾವೆಯನ್ನು ಇಂತಿಷ್ಟು ಹಣ ಬರಬೇಕೆಂದು ತಮ್ಮ ಮೇಲೆ ಹಾಕಿರುತ್ತಾರೆಂದರೆ ಸಾಕ್ಷಿಯು ಹೌದು ಎಂದು ಆ ಸಲುವಾಗಿ ಬರುತ್ತಿದ್ದೇನೆ ಎನ್ನುತ್ತಾರೆ. ನಾನು ಇಲ್ಲಿಯವರೆಗೂ ನನ್ನ ಮಕ್ಕಳ ಮೇಲೆ ಯಾವದೇ ಪ್ರಕರಣ ಮಾಡಿರುವದಿಲ್ಲ. ನಿಪಿ 2 ರಲ್ಲಿರುವ ಸಹಿಯು ತಮ್ಮದಲ್ಲದಾಗಿದ್ದರೂ ಅದನ್ನು ವಾದಿ ಸೃಷ್ಟಿಸಿರುತ್ತಾರೆಂದು ಹೇಳಿ ಯಾವದಾದರೂ ಕ್ರಿಮಿನಲ್ಲ ಪ್ರಕರಣವನ್ನು ದಾಖಲಿಸಿರುತ್ತೀರಾ ಎಂದರೆ ಸಾಕ್ಷಿಯು ನನ್ನ ಮಕ್ಕಳ ಮೇಲೆ ಯಾವದೇ ಪ್ರಕರಣ ಮಾಡಿಲ್ಲ ಎಂದು ನುಡಿಯುತ್ತಾರೆ. ತಮ್ಮ ಮಗ ರಾಜೇಶ ತಮ್ಮ ಕುಟುಂಬದಿಂದ ಬೇರೆಯಾದ ನಂತರ ತಮ್ಮ ಜೊತೆ ಉತ್ತಮವಾಗಿ ನಡೆದುಕೊಂಡಿರುತ್ತಾನೆಂದರೆ ಸರಿಯಲ್ಲ. ತಮ್ಮ ಮಗ

ರಾಜೇಶ ತಮ್ಮ ಜೊತೆ ಈಗಲೂ ಸಹ ಚೆನ್ನಾರಗಿ ನಡೆದುಕೊಳ್ಳುತ್ತಿದ್ದಾನೆಂದರೆ ಸರಿ. ನನಗೆ ಯಾವದೇ ಮಕ್ಕಳ ಮೇಲೆ ವೈಯಕ್ತಿಕವಾಗಿ ದ್ವೇಷ ಇರುವದಿಲ್ಲ. ತಾವು ವಾದಿಯಿಂದ ಪಡೆದ ಹಣವನ್ನು ಮರುಪಾವತಿಸಲು ಯಾವದೇ ಪ್ರಯತ್ನ ಮಾಡಿಲ್ಲ ಎಂದರೆ ಸಾಕ್ಷಿಯು ಆಗಲೇ ಹಣ ಕೊಟ್ಟಿದ್ದು ಆ ಸಮಯದಲ್ಲಿ ಏನೇನ್ನೂ ತಿಳಿಸಲಿಲ್ಲ ಎನ್ನುತ್ತಾರೆ. ಈ ಕೇಸನ್ನು ಹಾಕದಿದ್ದರೆ ತಾವು ಅವರಿಗೆ ಹಣವನ್ನು ಮರುಪಾವತಿಸುತ್ತಿದ್ದೀರಾ ಎಂದರೆ ಸಾಕ್ಷಿಯು ನಾಲ್ಕು ಜನರ ಜೊತೆ ಕೂಡಿ ಹಣವನ್ನು ಪಾವತಿಸುವ ಬಗ್ಗೆ ಯೋಚಿಸುತ್ತಿದ್ದೆ ಮತ್ತು ಪಾವತಿಸುತ್ತಿದ್ದೆ ಎನ್ನುತ್ತಾರೆ. ಈ ಕೇಸನ್ನು ದಾಖಲಿಸಿದ ನಂತರ ತಾವೇನಾದರೂ ತಮ್ಮ ಸಮಾಜಕ್ಕೆ ಅರ್ಜಿಯನ್ನು ಕೊಟ್ಟಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ.

8. ಟಿ ಎ ಚವ್ಹಾಣ ವಕೀಲರು ನನ್ನ ಸಹೋದರ ಆಗಿರುತ್ತಾರೆ. ಸದರಿ ವಕೀಲರು ಜೀವಿತಾವದಿದಿಯಲ್ಲಿತಾಮ್ಮ ಮನೆಗೆ ಸಂಬಂದಿಸಿದ ಯಾವದೇ ಕಾನೂನು ಸಮಸ್ಯೆಗಳನ್ನು ಬಗೆಹರಿಸುತ್ತಿದ್ದರು ಎಂದರೆ ಸಾಕ್ಷಿಯು ನನನ್ನ ಗಂಡ ಮತ್ತು ನನ್ನ ಅಣ್ಣ ಉತ್ತಮ ಬಾಂದವ್ಯ ಹೊಂದಿದರು ಎನ್ನುತ್ತಾರೆ. ಸದರಿ ವಕೀಲರು ತಮ್ಮ ಮನೆಯ ಕಾನೂನು ಸಲಹೆಗಾರರು ಎಂದರೆ ಸಾಕ್ಷಿಯು ನನ್ನ ಗಂಡ ಅವರನ್ನು ನೇಮಿಸಿದ್ದು ಅವರು ಹೋಗುತ್ತಿದ್ದರು ಎನ್ನುತ್ತಾರೆ. ಸದರಿ ವಕೀಲರು ತಮ್ಮ ಮಕ್ಕಳು ಸಲ್ಲಿಸಿದ ದಿವಾಳಿ ಪ್ರಕರಣವನ್ನು ನಡೆಸಿರುತ್ತಾರೆಂದರೆ ನೆನಪಿಲ್ಲ. ಟಿ ಎ ಚವ್ಹಾಣ ವಕೀಲರು ತಮ್ಮ ಮನೆತನಕ್ಕೆ ಕಾನೂನು ರೀತಿಯಲ್ಲಿ ಒಳ್ಳೆಯದನ್ನೆ ಮಾಡಿರುತ್ತಾರೆಂದರೆ ಸಾಕ್ಷಿಯು ಅವರ ದಂದೆ ಅವರಿಗೆ ನಮ್ಮ ದಂದೆ ನಮಗೆ ಎನ್ನುತ್ತಾರೆ. ತಮಗೆ ಸದರಿ ವಕೀಲರ ಮೇಲೆ ಕಾನೂನು ವಿಷಯಗಳಿಗೆ ಸಂಬಂದಿಸಿದಂತೆ ಸಾಕಷ್ಟು ನಂಬಿಕೆ ಇತ್ತು ಎಂದರೆ ಸಾಕ್ಷಿ ನಮ್ಮ ಮನೆಯವರು ಅವರ ಜೊತೆ ಚೆನ್ನಾಗಿದ್ದರು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಮೊಮ್ಮಗಳು ಮಗಳು ಮತುತ ಅಳಿಯ ನೀಡಿದ್ದಾರೆನ್ನುವ ಹಣದ ವ್ಯವಹಾರದಲ್ಲಿಯೂ ಸಹ ಟಿ ಎ ಚವ್ಹಾಣ ವಕೀಲರು ಮದ್ಯಸ್ಥಿಕೆಯನ್ನು ವಹಿಸಿದ್ದರು ಎಂದರೆ ನೆನಪಿಲ್ಲ. ಸದರಿ ವಕೀಲರು ಆ ಸಮಯದಲ್ಲಿ ಸಂಬಂದ ಮತ್ತು ವ್ಯವಹಾರಗಳು ಬೇರೆ ಬೇರೆ ಎಂದು ತಮಗೆ ತಿಳಿಸಿದ್ದರು ಎಂದರೆ ನೆನಪಿಲ್ಲ. ವ್ಯವಹಾರಿಕವಾಗಿ ತಾವೆಲ್ಲರೂ ಸರಿ ಇರಬೇಕೆಂದು ತಮಗೆ, ತಮ್ಮ ಅಳಿಯ, ಮಗಳು ಮತುತ ಮೊಮ್ಮಗಳಿಗೆ ತಿಳಿಸಿದ್ದರು ಎಂದರೆ ನೆನಪಿಲ್ಲ. ತಮ್ಮ ಅಣ್ಣ ಅಥವಾ ಸದರಿ ವಕೀಲರು ತಾವು ವಾದಿಯಿದ ಪಡೆದಿರುವ ಹಣಕ್ಕೆ ಭದ್ರತೆಗಾಗಿ ಆನ್ ಡಿಮಾಂಡ ಪ್ರನೋಟನ್ನು ಅವರೇ ತಯಾರಿಸಿರುತ್ತಾರೆಂದರೆ ಸರಿಯಲ್ಲ.

(ವಕೀಲರು ಈ ಸಮಯದಲ್ಲಿ ಮುಂದುವರೆದ ಪಾಟೀ ಸವಾಲಗೆ ಕೆಲವೊಂದು ದಾಖಲೆಗಳು ಅಗತ್ಯತೆ ಇರುವದರಿಂದ ಮುಂದೂಡಬೇಕೆಂದು ಸಮಯ ಕೋರಿದ್ದು ಸಮಯವನ್ನು ನೀಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.